

ಜೈಪುರದ ಹೊರವಲಯದ ಹಳ್ಳಿ ಬಗ್ರುವಿನಲ್ಲಿ, ನಶಿಸಿಹೋಗುತ್ತಿದ್ದ ಬಣ್ಣಗಳ ಕಲಾ ಪರಂಪರೆಯೊಂದನ್ನು ಫ್ಯಾಬ್ ಇಂಡಿಯಾ ತನ್ನ ಬಟ್ಟೆಗಳ ಮೂಲಕ ಪುನರುಜ್ಜೀವನಗೊಳಿಸಿದೆ.

■ ಬಿ.ಎಂ. ಹನೀಫ್

# ನೈಸರ್ಗಿಕ ಬಣ್ಣಗಳ ನವ ವಿನ್ಯಾಸ



ಬಣ್ಣಗಳೆಂದರೆ ಯಾರಿಗೆ ಇಷ್ಟವಿಲ್ಲ? ಬಣ್ಣಗಳಲ್ಲೂ ನೂರೆಂಟು ವಿಧ. ನೀಲಿ ಬಣ್ಣದಲ್ಲೇ ಸುಮಾರು ಹನ್ನೊಂದು ವೈವಿಧ್ಯಗಳಿವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಬಣ್ಣಗಳಿಲ್ಲದೆ ಬದುಕಿಲ್ಲ; ಬಣ್ಣಗಳಿಲ್ಲದೆ ಬಟ್ಟೆಗಳಿಲ್ಲ.

ಫ್ಯಾಷನ್ ಲೋಕದಲ್ಲಿ ಬಣ್ಣಗಳಿಗೆ ವಿಶಿಷ್ಟ ಸ್ಥಾನವಿದೆ. ಆದರೆ ಬಣ್ಣಗಳಿಗೆ ಬಳಸುವ ರಾಸಾಯನಿಕಗಳದ್ದೇ ದೊಡ್ಡ ಸಮಸ್ಯೆ. ಬಟ್ಟೆಗಳಲ್ಲಿ ಬಣ್ಣ ಢಾಳಾಗಿ ಕಾಣಿಸಲು ಉಪಯೋಗಿಸುವ ಟಾಕ್ಸಿನ್ ಒಂದರ್ಥದಲ್ಲಿ ಜೈವಿಕವಾಗಿ ತಯಾರಾದ ವಿಷವೇ. ಫ್ಯಾಷನ್ ಲೋಕದಲ್ಲಿ ಬಟ್ಟೆಗಳ ಬಣ್ಣಗಳ ಸಲುವಾಗಿ ಈಗ 8000ಕ್ಕೂ ಹೆಚ್ಚು ಸಿಂಥೆಟಿಕ್ ರಾಸಾಯನಿಕಗಳನ್ನು ಬಳಸುತ್ತಾರೆ ಎನ್ನಲಾಗಿದೆ. ಕಣ್ಣಿಗೆ ಎಷ್ಟೇ ಆಕರ್ಷಕವಾಗಿ ಕಂಡರೂ ಈ